**ಸಾಕ್ಷಿಯನ್ನು ದಿಃ 27.02.2026 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು**
**ಪಾಟೀ ಸವಾಲುಃ 1 ಮತ್ತು 2 ನೇ ಎದುರುದಾರರ ಪರ ಎ ಜಿ ಪಿ ರವರಿಂದ**

ಭೂಸ್ವಾಧೀನಪಡಿಸಿಕೊಳ್ಳುವ ಮುಂಚೆ ಸರ್ಕಾರದವರು ನನಗೆ ನೋಟಿಸ ಕೊಟ್ಟಿಲ್ಲ. ಐತೀರ್ಪು ನೋಟಿಸ ಬಂದಾಗ ನನಗೆ ನಮ್ಮ ಜಮೀನು ಭೂಸ್ವಾಧೀನಗೊಂಡ ಬಗ್ಗೆ ಗೊತ್ತಾಯಿತು. ಕುಡಚಿ ರೇಲ್ವೆಗೆ ನಮ್ಮ ಜಮೀನನ್ನು ಸ್ವಾಧೀನಪಡಿಸಿಕೊಂಡಿರುತ್ತಾರೆ. ಪ್ರಸ್ತುತ ಪ್ರಕರಣದೊಂದಿಗೆ ಒಟ್ಟುಗೂಡಿರುವ ಪ್ರಕರಣಗಳ ಅರ್ಜಿದಾರರ ಜಮೀನುಗಳ ಬಗ್ಗೆ ನನಗೆ ಮಾಹಿತಿ ಇದೆ. ಅರ್ಜಿದಾರರು ಬಾವಿಯಿಂದ,ಬೋರವೆಲ್ ಮತ್ತು ಕೆನಾಲಗಳಿಂದ ನೀರಾವರಿ ಮಾಡಿಕೊಂಡಿದ್ದಾರೆ. ಅರ್ಜಿದಾರರಿಗೆ ಪ್ರಸ್ತುತ ರೇಲ್ವೆ ಪ್ರೊಜೆಕ್ಟಗಾಗಿ ಸ್ವಾಧೀನಪಡಿಸಿಕೊಂಡ ಜಮೀನಗಳನ್ನು ಹೊರತುಪಡಿಸಿ ಬೇರೆ ಜಮೀನುಗಳು ಸಹ ಇವೆ. ನಾನು ಕೆ ಇ ಬಿ ಸರ್ವಿಸ್ ಲೈನ್ ದಾಖಲೆಗಳಲ್ಲಿ ಸರ್ವೆ ನಂಬರಗಳು ಇಲ್ಲ ಅಂದರೆ ಸರಿ, ಆದರೆ ಆರ್.ಆರ್. ನಂಬರ ಇವೆ. ನಾನು ಹಾಜರುಪಡಿಸಿರುವ ಕಬ್ಬಿನ ಕಾರ್ಖಾನೆಯ ರಶೀದಿಗಳಲ್ಲಿ ಸರ್ವೆ ನಂಬರ ನಮೂದು ಇಲ್ಲ. ನಾನು ಹಾಜರುಪಡಿಸಿರುವ ಕಬ್ಬಿನ ರಶೀದಿಗಳು ಭೂಸ್ವಾಧೀನಗೊಂಡ ನಂತರದ ರಶೀದಿಗಳು ಅಂದರೆ ಸರಿಯಲ್ಲ.

2. ನಮ್ಮ ಊರಿನಲ್ಲಿ ಪ್ರತಿವರ್ಷ ಹೊಲಗಳು ಮಾರಾಟವಾಗುತ್ತವೆ. ಭೂಸ್ವಾಧೀನಾಧಿಕಾರಿಗಳು ನಮ್ಮ ಎಲ್ಲರ ಜಮೀನಿನ ಬೆಲೆಗಳನ್ನು ಪರಿಶೀಲಿಸಿಯೇ ಯೋಗ್ಯಬೆಲೆಯನ್ನು ನಮ್ಮ ಜಮೀನುಗಳಿಗೆ ನಿರ್ಧರಿಸಿರುತ್ತಾರೆ ಅಂದರೆ ಸರಿಯಲ್ಲ. ಭೂಸ್ವಾಧೀನಾಧಿಕಾರಿಗಳು ಖರೀದಿಪತ್ರಗಳನ್ನು ಪರಿಗಣಿಸಿಯೇ ಬೆಲೆನಿಗದಿ ಪಡಿಸಿದ್ದಾರೆ ಅಂದರೆ ಸರಿಯಲ್ಲ. ನೀರಾವರಿ ಜಮೀನುಗಳಿಗೆ ಸಂಬಂಧಪಟ್ಟ ಕ್ರಯಪತ್ರಗಳನ್ನು ಪರಿಶೀಲಿಸಿಯೇ ಭೂಸ್ವಾಧೀನಾಧಿಕಾರಿಗಳು ಬೆಲೆನಿಗದಿ ಪಡಿಸಿರುತ್ತಾರೆ ಅಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಆರ್ ಟಿ ಸಿ ಗಳಲ್ಲಿ ಮೆಕ್ಕೆಜೋಳ ಬೆಳೆ ಇದೆ ಅಂದರೆ, ಒಂದರಲ್ಲಿ ಇದೆ ಹಾಗೂ ಕಬ್ಬು ಎಂದು ಸಹ ಇದೆ ಎಂದು ಸಾಕ್ಷಿ ಉತ್ತರಿಸುತ್ತಾರೆ. ಭೂಸ್ವಾಧೀನಪಡಿಸಿಕೊಂಡ ಜಮೀನುಗಳಲ್ಲಿ ಕಬ್ಬು ಬೆಳೆಯುತ್ತಿದ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

3. ನನ್ನ ಜಮೀನು ಹಾಲಿ 50 ಲಕ್ಷ ರೂ. ಪ್ರತಿ ಎಕರೆಗೆ ಬೆಲೆಬಾಳುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಪ್ರತಿವರ್ಷಕ್ಕೆ 50 ರಿಂದ 80 ಟನ್ ಕಬ್ಬು ಬೆಳೆಯುತ್ತಿದ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಕಬ್ಬಿನ ಇಳುವರಿ ಬಗ್ಗೆ ಪ್ರಮಾಣಪತ್ರ ಹಾಜರುಪಡಿಸಿಲ್ಲ ಅಂದರೆ ಸರಿಯಲ್ಲ. ಕಬ್ಬಿನಿಂದ ಪ್ರತಿವರ್ಷ 4 ಲಕ್ಷ ರೂ. ಆದಾಯ ಇದೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಅಂದರೆ ಸರಿ. ಅದರಲ್ಲಿ ನಾವೇ ಕೆಲಸ ಮಾಡಿರುತ್ತೇವೆ ಎಂದು ಸಾಕ್ಷಿ ಉತ್ತರಿಸುತ್ತಾರೆ. ಕಬ್ಬಿನ ಮೇವಿನಿಂದ ಹೈನುಗಾರಿಕೆ ಮಾಡುತ್ತಿದ್ದು, ಅದರಿಂದ ವಾರ್ಷಿಕ 2 ಲಕ್ಷರೂ. ಆದಾಯ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಐತೀರ್ಪಿನಲ್ಲಿ ಸಂಬಂಧಪಡದ ಕ್ರಯಪತ್ರಗಳನ್ನು ಉಲ್ಲೇಖಿಸಿ ಐತೀರ್ಪು ಹೊರಡಿಸಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಐತೀರ್ಪಿನ ಮುಂಚೆ ಯಾವುದೇ ನೋಟಿಸ ಕೊಟ್ಟಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

4. ನನ್ನ ಮುಖ್ಯವಿಚಾರಣೆಯ ಪ್ರಮಾಣಪತ್ರದ ಖಂಡಿಕೆ-4 ರಲ್ಲಿ ಎಲ್ ಎ ಸಿ ನಂ.5100/2021 ರ ತೀರ್ಪನ್ನು ಹಾಜರುಪಡಿಸಿದ್ದು, ಅಂದರೆ ನಿ.ಪಿ.28 ನ್ನು ಹಾಜರುಪಡಿಸಿರುತ್ತೇನೆ. ನಿ.ಪಿ.28 ರಲ್ಲಿನ ಜಮೀನು ನಮ್ಮ ಜಮೀನಿನಿಂದ 12 ಕಿಮೀ ದೂರದಲ್ಲಿದೆ. ಈ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. 12 ಕಿಮೀ ದೂರ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

5. ನಮ್ಮ ಜಮೀನಿನಿಂದ ರಬಕವಿ-ಬನಹಟ್ಟಿ ತಾಲೂಕು 7 ಕಿಮೀ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ರಬಕವಿ ಬನಹಟ್ಟಿಯಲ್ಲಿನ ಜಮೀನುಗಳು ಮತ್ತು ನಮ್ಮ ಜಮೀನುಗಳು ಹಾಗೂ ಮುಧೋಳ ತಾಲೂಕಿನ ಜಮೀನುಗಳು ಒಂದೇ ರೀತಿಯಾಗಿವೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಿ.ಪಿ.28 ರ ತೀರ್ಪು ನಮ್ಮ ಜಮೀನಿಗೆ ಅನ್ವಯಿಸುವುದಿಲ್ಲ ಅಂದರೆ ಸರಿಯಲ್ಲ. ನಿ.ಪಿ.28 ಮತ್ತು 29 ರ ತೀರ್ಪುಗಳಿಗೆ ಸಂಬಂಧಪಟ್ಟಂತೆ ಸರ್ಕಾರದವರು ಮೇಲ್ಮನವಿ ಸಲ್ಲಿಸಿದ್ದು, ಅದಕ್ಕೆ ತಡೆಯಾಜ್ಞೆ ಇದೆ ಎಂದು ನನಗೆ ಗೊತ್ತಿಲ್ಲ.

6. ನಮ್ಮ ಜಮೀನು ಭೂಪರಿವರ್ತನೆಯಾಗಲು ಯೋಗ್ಯವಾದ ಜಮೀನುಗಳು ಎಂದು ತೋರಿಸಲು ಐತೀರ್ಪಿನ ಸಮಯದಲ್ಲಿ ಭೂಸ್ವಾಧೀನಾಧಿಕಾರಿಗಳಿಗೆ ಯಾವುದೇ ದಾಖಲೆ ಹಾಗೂ ಅರ್ಜಿ ನೀಡಿಲ್ಲ. ನಿ.ಪಿ.28 ರ ತೀರ್ಪಿನಲ್ಲಿ ಭೂಪರಿವರ್ತನೆಗೆ ಯೋಗ್ಯ ಜಮೀನು ಎಂದು ಉಲ್ಲೇಖಿಸಿ ತೀರ್ಪು ಮಾಡಿದ್ದಾರೆ ಅಂದರೆ ಸರಿ. ಹೆಚ್ಚಿನ ಪರಿಹಾರ ಕೋರಿ ಸಲ್ಲಿಸಿದ ಅರ್ಜಿಗಳೆಲ್ಲಾ ಕಾಲಮಿತಿಯಲ್ಲಿ ಇಲ್ಲ ಅಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯಲು ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನನಗೆ ಇತರ ಅರ್ಜಿದಾರರು ತಮ್ಮ ಪರವಾಗಿ ಸಾಕ್ಷಿ ನುಡಿಯಲು ಅನುಮತಿ ನೀಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

MAHAMED IMTHIYAZ AHAMED
Digitally signed by MAHAMED IMTHIYAZ AHAMED
Date: 2026.03.02 17:28:02 +0530

1 ನೇ ಹೆಚ್ಚುವರಿ ಜಿಲ್ಲಾ ವ ಸತ್ರ ನ್ಯಾಯಾಧೀಶರು
ಬಾಗಲಕೋಟ, ಉಪಸ್ಥಿತಿ ಜಮಖಂಡಿ